# ‘ಶೌರ್ಯ’ ತಂಡದಿಂದ ಇಪ್ಪತ್ತು ಸಾವಿರ ರೂಪಾಯಿ ಉಳಿಯಿತು. ಮನೆ ರಿಪೇರಿಗೆ ಹಣ ಜೋಡಿಸುವ ಕಷ್ಟ ಇಲ್ಲವಾಯಿತು.



“ಮನೆ ರಿಪೇರಿ ಮಾಡಿಸಲು ಹಣ ಜೋಡಿಸಲು ಕಷ್ಟವಾಗುತ್ತಿತ್ತು. ಸಾಲ ಮಾಡುವ ಅನಿವಾರ್ಯತೆ ಇತ್ತು. ಮನೆಯ ಮೇಲ್ಛಾವಣಿ ಹಳೆಯದಾಗಿದ್ದರಿಂದ ಸರಿಪಡಿಸದೇ ಇದ್ದರೆ ಅಪಾಯದ ಸಾಧ್ಯತೆ ಇತ್ತು. ನಮ್ಮ ಶೌರ್ಯ ತಂಡದ ಸ್ವಯಂಸೇವಕರು ನಿನ್ನೊಂದಿಗೆ ನಾವಿದ್ದೇವೆ. ಮನೆ ರಿಪೇರಿಗೆ ನಾವು ಕೈಜೋಡಿಸುತ್ತೇವೆ ಎಂದರು. ಎರಡು ದಿನ ಕೆಲಸಗಾರರಿಗೆ ದಿನಗೂಲಿ ಕೊಟ್ಟು ಮಾಡಿಸಬೇಕಾದ ಕೆಲಸವನ್ನು ಕೇವಲ ಒಂದೇ ದಿನದಲ್ಲಿ ಶೌರ್ಯ ತಂಡದ ಸದಸ್ಯರು ಮಾಡಿಕೊಟ್ಟರು. ಇವರು ಮಾಡಿದ ಉಪಕಾರದಿಂದಾಗಿ ನನಗೆ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಉಳಿದಂತಾಯಿತು. ಸಾಲ ಮಾಡುವುದು ತಪ್ಪಿತು.

ಶೌರ್ಯ ತಂಡವನ್ನು ರಚಿಸಿಕೊಟ್ಟ ಪೂಜ್ಯರಿಗೆ ಮತ್ತು ಮಾತೃಶ್ರೀ ಅಮ್ಮನವರಿಗೆ ಭಕ್ತಿಯಿಂದ ಕೃತಜ್ಞತೆ ಸಲ್ಲಿಸುತ್ತೇನೆ" ತಮ್ಮ ಮನಸ್ಸಿನ ಮಾತುಗಳನ್ನು ಹಂಚಿಕೊಂಡರು ಕುಕ್ಕಾವು ಗ್ರಾಮದ ಸುರೇಶ್ ಪೂಜಾರಿ.



ಬೆಳ್ತಂಗಡಿ ತಾಲ್ಲೂಕಿನ ಕುಕ್ಕಾವು ಗ್ರಾಮದ ಸುರೇಶ್ ಪೂಜಾರಿ ಇವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ರಚಿಸಲಾದ ಶುಭಾಷಯ ಎನ್ನುವ ಸಂಘದ ಸದಸ್ಯರಾಗಿದ್ದಾರೆ. ಅಲ್ಲದೇ ಪ್ರಗತಿಬಂಧು ಸ್ವ ಸಹಾಯ ಸಂಘಗಳ ಒಕ್ಕೂಟದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ನಾಲ್ಕು ವರ್ಷದ ಹಿಂದೆ ಶೌರ್ಯ ಶ್ರೀ ಧರ್ಮಸ್ಥಳ ವಿಪತ್ತು ನಿರ್ವಹಣಾ ಘಟಕದ ಸ್ವಯಂಸೇವಕರಾಗಿ ಸೇರಿಕೊಂಡು ತಮ್ಮ ಗ್ರಾಮದಲ್ಲಿ ನಡೆಯುವ ಅನೇಕ ವಿಪತ್ತುಗಳ ನಿರ್ವಹಣೆಗೆ ಮತ್ತು ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಇವರ ಮನೆಯ ಮೇಲ್ಛಾವಣಿ ಹಳೆಯದಾಗಿದ್ದು ಅದನ್ನು ತೆರವುಗೊಳಿಸಿ ಹೊಸದಾಗಿ ರಚನೆ ಮಾಡಬೇಕಾಗಿತ್ತು. ಈ ವಿಷಯವನ್ನು ಶೌರ್ಯ ಘಟಕದ ಸದಸ್ಯರಲ್ಲಿ ಪ್ರಸ್ತಾಪಿಸಿದ್ದರು. “ನಮ್ಮ ಘಟಕದ ಮೂಲಕ ಅನೇಕ ಅಸಹಾಯಕರಿಗೆ ಮನೆ ರಿಪೇರಿ, ಹೊಸ ಮನೆ ನಿರ್ಮಾಣದಂತಹ ಕೆಲಸವನ್ನು ನಮ್ಮ ತಂಡದಿಂದ ಮಾಡಿದ್ದೇವೆ. ನಿಮ್ಮ ಮನೆಯನ್ನೂ ಸಹ ನಮ್ಮ ತಂಡದವರು ಮಾಡಿಕೊಡುವ ಬಗ್ಗೆ ಘಟಕದಲ್ಲಿ ಚರ್ಚೆ ಮಾಡುತ್ತೇನೆ ಎಂದು ಕೆಲವರು ತಮ್ಮ ಅಭಿಪ್ರಾಯ ತಿಳಿಸಿದ್ದರು.



ತಮ್ಮದೇ ಘಟಕದ ಸ್ವಯಂಸೇವಕನ ಮನೆಯ ರಿಪೇರಿಯ ಬಗ್ಗೆ ಕೇಳಿ ತಿಳಿದ ಸ್ವಯಂಸೇವಕರು ಎಲ್ಲರೂ ಒಗ್ಗಟ್ಟಾಗಿ ಒಂದು ದಿನದ ಶ್ರಮದಾನ ನಡೆಸಲು ತೀರ್ಮಾನಿಸಿದರು.

ಶ್ರಮದಾನವನ್ನು ಬೆಳಿಗ್ಗೆ 6 ಗಂಟೆಯಿಂದಲೇ ಆರಂಭಿಸಿ ಹಳೆಯ ಹಂಚುಗಳನ್ನು ಇಳಿಸಿ, ಹಳೆಯ ರೀಪು ಪಕಾಸುಗಳನ್ನು ತೆಗೆದು, ಹೊಸದಾಗಿ ಅಳವಡಿಸಿ, ಹಂಚುಗಳನ್ನು ಸ್ವಚ್ಛಗೊಳಿಸಿ ಪುನಃ ಅಳವಡಿಸುವ ಕೆಲಸವನ್ನು ಮಾಡಿರುತ್ತಾರೆ.

ಸ್ವಯಂಸೇವಕರ ಈ ಶ್ರಮದಾನ ಕುಟುಂಬದ ಸದಸ್ಯರಿಗೆ ಮಾತ್ರವಲ್ಲದೇ ಗ್ರಾಮಸ್ಥರಿಗೂ ಅಚ್ಚರಿ ಮೂಡಿಸಿದ್ದು ಒಗ್ಗಟ್ಟಿನ ಸಹಕಾರಕ್ಕೆ ಸಂತೋಷ ವ್ಯಕ್ತಪಡಿಸಿರುತ್ತಾರೆ. ತಮ್ಮ ಮನೆಯ ಕೆಲಸ ಎಂಬಂತೆ ಎಲ್ಲರೂ ದುಡಿದಿದ್ದಾರೆ. ಅವರಿಗೆ ಎಷ್ಟು ಕೃತಜ್ಞತೆ ಹೇಳಿದರೂ ಸಾಲದು ಎಂದು ಸುರೇಶ್ ಪೂಜಾರಿ ಇವರ ತಾಯಿ ಗೀತಾ ರವರು ತಮ್ಮ ಖುಷಿಯನ್ನು ಹಂಚಿಕೊಂಡರು.

ಶೌರ್ಯ